RNU AIR DHARWAD

MAY 05, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ರಾಷ್ಟ್ರದ ಭದ್ರತೆಯ ವಿಷಯದಲ್ಲಿ,** ಎಲ್ಲ ರಾಜಕೀಯ ಪಕ್ಷಗಳು, ಒಗ್ಗಟ್ಟು ಪ್ರದರ್ಶಿಸಬೇಕು – ಎಚ್.ಡಿ. ದೇವೇಗೌಡ, ಕರೆ.
- **ಉಪ ರಾಷ್ಟ್ರಪತಿ ಜಗದೀಪ ಧನಕರ್, ಇಂದು,** ಉತ್ತರಕನ್ನಡ ಜಿಲ್ಲೆ, ಶಿರಸಿಯ ಅರಣ್ಯ ಮಹಾವಿದ್ಯಾಲಯಕ್ಕೆ, ಭೇಟಿ.
- **ಇಂದಿನಿಂದ, ಬೋಧ್‌ಗಯಾದಲ್ಲಿ,** ಖೇಲೋ ಇಂಡಿಯಾ, ರಾಷ್ಟ್ರೀಯ ಯುವ ಕ್ರೀಡಾಕೂಟ; ರಾಜ್ಯದ 12 ಮಲ್ಲಕಂಬ ಪಟುಗಳು, ಭಾಗಿ.
- **ವೇವ್ಸ್ ಶೃಂಗಸಭೆ ಸಮಾರೋಪ;** ಸಾವಿರದ 300 ಕೋಟಿ ರೂಪಾಯಿ, ವ್ಯವಹಾರ ಒಪ್ಪಂದಗಳಿಗೆ, ಮುದ್ರೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರದ ಭದ್ರತೆಯ ವಿಷಯದಲ್ಲಿ,** ಎಲ್ಲ ರಾಜಕೀಯ ಪಕ್ಷಗಳು, ಒಗ್ಗಟ್ಟು ಪ್ರದರ್ಶಿಸಬೇಕು ಎಂದು, ಮಾಜಿ ಪ್ರಧಾನಮಂತ್ರಿ, ಜೆ.ಡಿಎಸ್. ವರಿಷ್ಠ, ಎಚ್.ಡಿ. ದೇವೇಗೌಡ ಕರೆ ನೀಡಿದ್ದಾರೆ. ಹಾಸನ ತಾಲೂಕು, ದ್ಯಾಪಲಾಪುರದಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರ, ಕಠಿಣ ಕ್ರಮಗಳಿಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದರು. ಪ್ರಧಾನಮಂತ್ರಿಯವರ ತೀರ್ಮಾನಕ್ಕೆ ಎಲ್ಲರೂ ಬದ್ಧರಾದಾಗ ಮಾತ್ರ, ಭಯೋತ್ಪಾದನೆಯ ಮೂಲೋತ್ಪಾಟನೆ ಸಾಧ್ಯ, ಎಂದು ಹೇಳಿದರು.

<><><>

**ಉಪ ರಾಷ್ಟ್ರಪತಿ,** ಜಗದೀಪ ಧನಕರ್ ಅವರು, ಇಂದು ಉತ್ತರಕನ್ನಡ ಜಿಲ್ಲೆ, ಶಿರಸಿಯ, ಅರಣ್ಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಲಿದ್ದಾರೆ.

<><><>

**ಉಪರಾಷ್ಟ್ರಪತಿಯವರ ವಿಶೇಷ** ಕರ್ತವ್ಯಾಧಿಕಾರಿ, ಸಿದ್ದಾಪುರದ ರಾಜೇಶ ನಾಯ್ಕ ಅವರ ತಾಯಿ ಕೆಲ ದಿನಗಳ ಹಿಂದೆ ನಿಧನ ಹೊಂದಿದ್ದು, ಜಗದೀಪ ಧನಕರ್, ಆ ತಾಯಿಯ ಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನಮನ ಸಲ್ಲಿಸಲಿದ್ದಾರೆ. 'ಏಕ್ ಪೇಢ್ ಮಾ ಕೇ ನಾಮ್' ಪ್ರಕಲ್ಪದಡಿ, ರಾಜೇಶ ನಾಯ್ಕ್ ಅವರ ತಾಯಿಯ ನೆನಪಿನಲ್ಲಿ, ಸಸಿಯೊಂದನ್ನು ನೆಡಲಿದ್ದಾರೆ.

<><><>

**ಕುಸುಮ್ ಯೋಜನೆ ಅಡಿ,** ಹಾವೇರಿ ಜಿಲ್ಲೆಯ, ಪ್ರತಿ ತಾಲೂಕಿನಲ್ಲಿ, 20 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಸ್ಥಾಪಿಸಿ, ಹಗಲು ಹೊತ್ತಿನಲ್ಲಿ, ರೈತರ ಪಂಪ್‌ಸೆಟ್‌ಗಳಿಗೆ, ಕೃಷಿಗಾಗಿ ವಿದ್ಯುತ್ ಪೂರೈಸಲು, ಕ್ರಮ ಕೈಗೊಳ್ಳುವುದಾಗಿ, ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಹಾನಗಲ್ ತಾಲೂಕು, ಅಕ್ಕಿಆಲೂರಿನಲ್ಲಿ 650 ಕೋಟಿ ರೂಪಾಯಿ ವೆಚ್ಚದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ, ಚಾಲನೆ ನೀಡಿ, ಮಾತನಾಡಿದರು.

<><><>

**ಬೆಳಗಾವಿ ವಿಭಾಗಕ್ಕೆ ಸೇರಿದ, ಬಾಗಲಕೋಟೆ ಜಿಲ್ಲೆ,** ತುಳಸಿಗೇರಿ ಗ್ರಾಮ ಅನೇಕ ಮಲ್ಲಕಂಬ ಪಟುಗಳನ್ನು ರಾಷ್ಟ್ರಕ್ಕೆ ನೀಡಿದ, ಹಿರಿಮೆ ಹೊಂದಿದೆ. ತುಳಸಿಗೇರಿ ಗ್ರಾಮದ ನಾಲ್ವರು ಬಾಲಕರು ಮತ್ತು ನಾಲ್ವರು ಬಾಲಕಿಯರು ಸೇರಿದಂತೆ, ರಾಜ್ಯದಿಂದ ಒಟ್ಟು 6 ಯುವಕರು ಹಾಗೂ 6 ಯುವತಿಯರು ಸೇರಿ, ಒಟ್ಟು 12 ಜನ, ಪ್ರತಿಭಾನ್ವಿತ ಮಲ್ಲಕಂಬ ಪಟುಗಳು.. ಬಿಹಾರ, ಬೋಧ್‌ಗಯಾದ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸಂಸ್ಥೆಯ ಆಥಿತ್ಯದಲ್ಲಿ, ಇಂದಿನಿಂದ ಆರಂಭಗೊಳ್ಳುವ, 7ನೇ ಆವೃತ್ತಿಯ ಖೇಲೋ ಇಂಡಿಯಾ, ರಾಷ್ಟ್ರೀಯ ಯುವ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ.

ಗುರುವಾರ 8ನೇ ತಾರೀಖಿನ ವರೆಗೆ, ಸ್ಪರ್ಧೆಗಳು ನಡೆಯಲಿವೆ.

ಈ ಕುರಿತು ಒಂದು ವರದಿ..

***ಪ್ರಧಾನಮಂತ್ರಿ ನರೇಂದ್ರ ಮೋದಿ*** *ಅವರ ಪರಿಕಲ್ಪನೆಯಲ್ಲಿ ಅರಳಿದ, ಖೇಲೋ ಇಂಡಿಯಾ ಯೂಥ್ ಗೇಮ್ಸ್, ದೇಸಿ ಕ್ರೀಡೆಗಳಾದ, ಖೋ ಖೋ, ಮಲ್ಲಕಂಬ ಹಾಗೂ ಯೋಗಾಸನ ಸ್ಪರ್ಧೆಗೂ ಅವಕಾಶ ಕಲ್ಪಿಸಿರುವುದು, ವಿಶೇಷ.*

*15ನೇ ತಾರೀಖಿನ ವರೆಗೆ ನಡೆಯಲಿರುವ, ಖೇಲೋ ಇಂಡಿಯಾ ಯೂಥ್ ಗೇಮ್ಸ್, ರಾಷ್ಟ್ರೀಯ ಕ್ರೀಡಾಕೂಟದಲ್ಲಿ, ಒಟ್ಟು 28 ಕ್ರೀಡಾ ವಿಭಾಗಗಳಲ್ಲಿ, ರಾಷ್ಟ್ರೀಯ ಸ್ಥರದ ಸ್ಪರ್ಧೆಗಳು ಆಯೋಜಿತವಾಗಿವೆ.*

***ತುಳಸಿಗೇರಿ ಗ್ರಾಮದ ಪ್ರತಿಭಾನ್ವಿತ ಮಲ್ಲಕಂಬ ಪಟುಗಳು,*** *ಹಗ್ಗದ ಮಲ್ಲಕಂಬ, ನೇತಾಡುವ ಮಲ್ಲಕಂಬ ಹಾಗೂ ಮರದ ಮಲ್ಲಕಂಬ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ತುಳಸಿಗೇರಿಯ ನಾಲ್ಕು ಜನ ಮಲ್ಲಕಂಬ ಪಟುಗಳು, ರಾಜ್ಯ ಸರ್ಕಾರದ ಕ್ರೀಡಾರತ್ನ ಪ್ರಶಸ್ತಿಗೂ ಭಾಜನರಾಗಿದ್ದಾರೆ.*

***ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು, ಮಾಹಿತಿ ನೀಡಿದ್ದಾರೆ,*** *ತುಳಸಿಗೇರಿಯ ಸರ್ಕಾರಿ ಹಿರಿಯ ಪ್ರೌಢ ಶಾಲೆಯ, ದೈಹಿಕ ಶಿಕ್ಷಣ ಶಿಕ್ಷಕ ಹಾಗೂ ಮಲ್ಲಕಂಬಪಟು, ಸಿ.ಕೆ ಚನ್ನಾಳ.*

<><><>

**ವಿವೇಕ ಧ್ವನಿ (44) + ಸಿ.ಕೆ. ಚನ್ನಾಳ ಧ್ವನಿ (45) ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

**ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು**

<><><>

**ಜಾಗತಿಕ ಶ್ರಾವ್ಯ, ದೃಶ್ಯ ಹಾಗೂ** ಮನೋರಂಜನಾ ಶೃಂಗಸಭೆ, ವೇವ್ಸ್ –20'25, ಮುಂಬಯಿಯ, ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ, ನಾಲ್ಕು ದಿನಗಳ ಕಾಲ, ಯಶಸ್ವಿಯಾಗಿ ನಡೆದು, ಸಂಪನ್ನಗೊಂಡಿತು.

**90 ದೇಶಗಳ, 10 ಸಾವಿರಕ್ಕೂ ಹೆಚ್ಚು** ಪ್ರತಿನಿಧಿಗಳು ಪಾಲ್ಗೊಂಡಿದ್ದ, ವೇವ್ಸ್ ಶೃಂಗಸಭೆಯಲ್ಲಿ, ಸಾವಿರದ 300 ಕೋಟಿ ರೂಪಾಯಿ ಮೌಲ್ಯದ ವೇವ್ಸ್ ಬಜಾರ್ ವ್ಯವಹಾರ ಒಪ್ಪಂದಗಳಿಗೆ, ಸೃಷ್ಟಿಕರ್ತರು ಹಾಗೂ ಚಲನಚಿತ್ರ ತಯಾರಕರು ಸಹಿ ಹಾಕಿದ್ದಾರೆ.

**ವೇವ್ಸ್‌ನ ನವೋದ್ಯಮ ಪ್ರೋತ್ಸಾಹಕ** ಕಾರ್ಯಕ್ರಮ, 'ವೇವ್ಸ್–ಎಕ್ಸ್' 15 ನವೋದ್ಯಮಗಳಿಗೆ ಬಂಡವಾಳ ಆಕರ್ಷಿಸುವ ನಿರೀಕ್ಷೆಯಿದೆ.

<><><>

**ಸಿನಿಮಾ ಸಾಹಿತ್ಯ, ಚಿತ್ರೀಕರಣ,** ಗ್ರಾಫಿಕ್ಸ್ ಮತ್ತು ಎನಿಮೇಶನ್ ಕ್ಷೇತ್ರದ ನವೋದ್ಯಮ, ಮುಂಬಯಿಯ, ಟ್ರೈಬಲ್ ಗೊರಿಲ್ಲಾ, ನಾಲ್ಕು ವ ರ್ಷಗಳ ಹಿಂದೆ, ಮಾನವೇಂದ್ರ ಸಿಂಗ್ ಸಾರಥ್ಯದಲ್ಲಿ ಕಾರ್ಯಾರಂಭಿಸಿದೆ.

ವೇವ್ಸ್ ಶೃಂಗ ಸಭೆಯಲ್ಲಿ ಪಾಲ್ಗೊಂಡಿದ್ದ, ಟ್ರೈಬಲ್ ಗೋರಿಲ್ಲಾ ನವೋದ್ಯಮದ, ಪೂರ್ವ ನಿರ್ಮಾಣ ಹಂತದ ಯೋಜಕ ಹಾಗೂ ಚಿತ್ರಕಥೆಗಾರ, ಬಳ್ಳಾರಿ ಮೂಲದ, ಮಹಾವೀರಸಿಂಗ್ ರಜಪೂತ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಮಹಾವೀರಸಿಂಗ್ ರಜಪೂತ್ ಧ್ವನಿ 45 ಸೆಕೆಂದುಗಳು**

<><><>

**ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು**

<><><>

**ಪರಿಶಿಷ್ಟ ಜಾತಿಯ, ಒಳ ಮೀಸಲಾತಿ** ಗಣತಿದಾರರು, ಇಂದಿನಿಂದ 17ರ ವರೆಗೆ, ರಾಜ್ಯಾದ್ಯಂತ, ಮನೆಗಳಿಗೆ ಭೇಟಿ ನೀಡಿ, ಸಮೀಕ್ಷಿಸಲಿದ್ದಾರೆ. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಏಕ ಸದಸ್ಯ ವಿಚಾರಣಾ ಆಯೋಗದಿಂದ, ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ದತ್ತಾಂಶಗಳನ್ನು ಸಂಗ್ರಹಿಸಲು, ಮನೆ, ಮನೆಗೆ ತೆರಳಿ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗುತ್ತಿದೆ.

<><><>

**ಸಮೀಕ್ಷೆಗೆ ಸಂಬಂಧಿಸಿ,** ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ವಿಶೇಷ ನಿಯಂತ್ರಣ ಕೊಠಡಿ ತೆರೆಯಲಾಗಿದೆ. ದಿನದ 24 ಗಂಟೆ, ಸಹಾಯವಾಣಿ ಸಂಖ್ಯೆ, 0836–2244001 ಕ್ಕೆ ಕರೆ ಮಾಡಿ, ಮಾಹಿತಿ ಪಡೆಯಬಹುದು.

<><><>

**ಮಹರ್ಷಿ ಭಗೀರಥ** ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿ, ಗೌರವಾರ್ಪಿಸಿದ ವರದಿಗಳು ಬಂದಿವೆ.

<><><>

**ಬೆಂಗಳೂರಿನ ನಯನ ಸಭಾಂಗಣದಲ್ಲಿ** ಆಯೋಜಿಸಿದ್ದ, ಮಹರ್ಷಿ ಭಗೀರಥ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ, ಶಿವರಾಜ ತಂಗಡಗಿ, ಪ್ರಸಕ್ತ ಸಾಲಿನಲ್ಲಿ ಉಪ್ಪಾರ ಅಭಿವೃದ್ಧಿ ನಿಗಮಕ್ಕೆ, 42 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ. ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ ಹಾಗೂ ಸ್ವಯಂ ಉದ್ಯೋಗ ಸಾಲ ಯೋಜನೆ ಅಡಿಯಲ್ಲಿ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದರು. ಒಟ್ಟು, ಸಾವಿರದ 6 ನೂರು ಕೋಟಿ ರೂಪಾಯಿಗಳನ್ನು, ರಾಜ್ಯದ ನಿಗಮಗಳಿಗೆ ಅನುದಾನ ರೂಪದಲ್ಲಿ ಒದಗಿಸಲಾಗಿದೆ ಎಂದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಮಂಡ್ಯದ ಮದ್ದೂರಿನಲ್ಲಿ,** ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಅವರಿಗೆ, ಎಸ್.ಎಂ.ಕೃ ಣ ಸಮಷ್ಟಿ ಹಿತಚಿಂತನಾ ಪ್ರಶಸ್ತಿ ನೀಡಿ, ಚುಂಚಶ್ರೀ ಬಳಗ ಸನ್ಮಾನಿಸಿತು.

<><><>

**ಚಾಮರಾಜನಗರ ಜಿಲ್ಲೆ, ಕೂಡನಹಳ್ಳಿ ಗ್ರಾಮದ,** ಸಹಜ ಕೃಷಿಕ, ಸಂತೋಷ ಅವರ ತೋಟದಲ್ಲಿ, ಮೈಸೂರು ಸಹಜ ಕೃಷಿ ಬಳಗ, 'ಅಚ್ಚರಿ ಗಡಿಗೆ' ಎಂಬ, ಸಹ ಭೋಜನ ಕಾರ್ಯಕ್ರಮ ಆಯೋಜಿಸಿತ್ತು.

<><><>

**ಕೇಂದ್ರ ಕೃಷಿ ಖಾತೆ ಸಚಿವ, ಶಿವರಾಜ್ ಸಿಂಗ್ ಚೌಹ್ವಾಣ್,** ಹೊಸ ದಿಲ್ಲಿಯಲ್ಲಿ, ಭಾರತೀಯ ಕೃಷಿ ಸಂಶೋಧನಾ ಪರಿ ’ತ್ – ಐ.ಸಿ.ಎ.ಆರ್. ಅಭಿವೃದ್ಧಿಪಡಿಸಿದ, ಭತ್ತದ ಎರಡು ಹೊಸ ತಳಿಗಳನ್ನು, ಬಿಡುಗಡೆ ಮಾಡಿದರು.

<><><>

**ರಾಯಚೂರು ಕೃಷಿ ಮಹಾವಿದ್ಯಾಲಯದ,** ನಿವೃತ್ತ ಶಿಕ್ಷಣ ನಿರ್ದೇಶಕ, ಪ್ರಖ್ಯಾತ ಮಣ್ಣು ವಿಜ್ಞಾನಿ, ಎ.ಎಸ್. ಹಾದಿಮನಿ ಅವರ ಸ್ಮರಣಾರ್ಥ, ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ, ಇಂದು ಬೆಳಗ್ಗೆ ೧೧ ಗಂಟೆಗೆ, ಉಪನ್ಯಾಸ ಏರ್ಪಡಿಸಲಾಗಿದೆ. ಹೊಸ ದಿಲ್ಲಿಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ, ಪ್ರಖ್ಯಾತ ಮಣ್ಣು ವಿಜ್ಞಾನಿ, ಅಮರೇಶ ಕುಮಾರ ನಾಯಕ್ ಉಪನ್ಯಾಸ ನೀಡಲಿದ್ದಾರೆ.

<><><>

**ಉಪ ಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ,** ಇಂದು ಮತ್ತು ನಾಳೆ, ಚಿಕ್ಕಬಳ್ಳಾಪುರ ಜಿಲ್ಲೆ ಪ್ರವಾಸ ಕೈಗೊಂಡಿದ್ದು, ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

<><><>

**ಪೆಹಲ್ಗಾಮ್ ಉಗ್ರರ ದಾಳಿ** ಹಾಗೂ ಮಂಗಳೂರಿನಲ್ಲಿ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಗಳನ್ನು ಖಂಡಿಸಿ, ಇಂದು ಚಿಕ್ಕಮಗಳೂರು ಜಿಲ್ಲೆ ಬಂದ್‌ಗೆ, ವಿವಿಧ ಸಂಘಟನೆಗಳು ಕರೆ ನೀಡಿವೆ.

<><><>

**ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ,** ಇಂದು ಸಂಜೆ 6 ಗಂಟೆಗೆ, ಕೆ.ಎಸ್. ದೇಶಪಾಂಡೆ ದತ್ತಿ ಅಂಗವಾಗಿ, ಬಸವಪ್ರಭು ಹೊಸಕೇರಿ ಅವರು, 'ಖಾದಿ: ನಿನ್ನೆ–ಇಂದು–ನಾಳೆ' ಕುರಿತು ಉಪನ್ಯಾಸ ನೀಡುವರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಷ್ಟ್ರದ ಭದ್ರತೆಯ ವಿಷಯದಲ್ಲಿ,** ಎಲ್ಲ ರಾಜಕೀಯ ಪಕ್ಷಗಳು, ಒಗ್ಗಟ್ಟು ಪ್ರದರ್ಶಿಸಬೇಕು – ಎಚ್.ಡಿ. ದೇವೇಗೌಡ, ಕರೆ.
- **ಉಪ ರಾಷ್ಟ್ರಪತಿ ಜಗದೀಪ ಧನಕರ್, ಇಂದು,** ಉತ್ತರಕನ್ನಡ ಜಿಲ್ಲೆ, ಶಿರಸಿಯ ಅರಣ್ಯ ಮಹಾವಿದ್ಯಾಲಯಕ್ಕೆ, ಭೇಟಿ.
- **ಇಂದಿನಿಂದ, ಬೋಧ್‌ಗಯಾದಲ್ಲಿ,** ಖೇಲೋ ಇಂಡಿಯಾ, ರಾಷ್ಟ್ರೀಯ ಯುವ ಕ್ರೀಡಾಕೂಟ; ರಾಜ್ಯದ 12 ಮಲ್ಲಕಂಬ ಪಟುಗಳು, ಭಾಗಿ.
- **ವೇವ್ಸ್ ಶೃಂಗಸಭೆ ಸಮಾರೋಪ;** ಸಾವಿರದ 300 ಕೋಟಿ ರೂಪಾಯಿ, ವ್ಯವಹಾರ ಒಪ್ಪಂದಗಳಿಗೆ, ಮುದ್ರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>